ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯ ಮಾಹಿತಿ

ಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 22/3/21

# ಮಹಾ ಸರ್ಕಾರಕ್ಕೆ ವಸೂಲಿ ಸಂಕಟ

## ಅನಿಲ್ ದೇಶಮುಖ್ ತಲೆದಂಡ ಸಾಧ್ಯತೆ

ಮುಂಬೈ: ಪ್ರತಿ ತಿಂಗಳು 100 ಕೋಟಿ ರೂ. ವಸೂಲಿ ಮಾಡುವಂತೆ ಗೃಹ ಸಚಿವ ಅನಿಲ್ ದೇಶ್‌ಮುಖ್ ಸೂಚಿಸಿದ್ದರು ಎಂಬ ನಿರ್ಗಮಿತ ಮುಂಬೈ ಪೊಲೀಸ್ ಆಯುಕ್ತ ಪರಂಭೀರ್ ಸಿಂಗ್ ಅವರ ಸ್ಫೋಟಕ ಹೇಳಿಕೆ ಮಹಾರಾಷ್ಟ್ರ ರಾಜಕಾರಣವನ್ನೇ ಅಲ್ಲಾಡಿಸಿದೆ. ಅಷ್ಟೇ ಅಲ್ಲ, ಮಹಾರಾಷ್ಟ್ರ ವಿಕಾಸ್ ಅಗಡಿ (ಎಂವಿಎ)ಯಲ್ಲೂ ಇದು ಒಡಕಿಗೆ ಕಾರಣವಾಗಿದೆ. ಜತೆಗೆ, ಸೋಮವಾರ ಅನಿಲ್ ದೇಶ್‌ಮುಖ್ ಅವರ ಕುರಿತಂತೆ ನಿರ್ಧಾರವಾಗುವ ಸಾಧ್ಯತೆ ಇದೆ.



100 ಕೋಟಿ ರೂ. ವಸೂಲಿ ಹೇಳಿಕೆಯ ಸಮಯವನ್ನು ಪ್ರಶ್ನಿಸಿರುವ ಎನ್‌ಸಿಪಿ ನಾಯಕ ಶರದ್ ಪವಾರ್, ಈ ಬಗ್ಗೆ ಕೂಲಂಕಷ, ಸ್ವತಂತ್ರ ತನಿಖೆಗೆ ಆಗ್ರಹಿಸಿದ್ದಾರೆ. ಅಷ್ಟೇ ಅಲ್ಲ, ಗೃಹ ಸಚಿವ ಅನಿಲ್ ದೇಶ್‌ಮುಖ್ ಅವರ ಬಗ್ಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕ್ರಮ ತೆಗೆದುಕೊಳ್ಳಬಹುದು ಎಂದೂ ಪವಾರ್ ಹೇಳಿದ್ದಾರೆ.

ಇವರ ಮಧ್ಯೆಯೇ, ಪರಂಭೀರ್ ಸಿಂಗ್ ಅವರ ಹೇಳಿಕೆ ಮತ್ತು ಸಚಿನ್ ವಾಜೆ ಅವರ ಪ್ರಕರಣದಿಂದಾಗಿ ಎಂವಿಎ ಸರ್ಕಾರದ ವರ್ಚಸ್ಸಿಗೆ ಭಾರೀ ಧಕ್ಕೆಯಾಗಿದೆ ಎಂದು ಶಿವಸೇನೆ ಹೇಳಿದೆ. ನಾಸಿಕ್‌ನಲ್ಲಿ ಮಾತನಾಡಿದ ಶಿವಸೇನೆ ಮುಖಂಡ ಸಂಜಯ್ ರಾವತ್, ಈ ಬಗ್ಗೆ ಮೂರು ಪಕ್ಷಗಳೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಜತೆಗೆ, ಈ ಪ್ರಕರಣಗಳಿಂದ ಆಗಿರುವ ಧಕ್ಕೆಯನ್ನು ಸರಿಪಡಿಸಿಕೊಳ್ಳಬೇಕು ಎಂದೂ ಹೇಳಿದ್ದಾರೆ. ಭಾನುವಾರ ಬೆಳಗ್ಗೆಯಷ್ಟೇ 'ನಾವು ಹೊಸ ದಾರಿಗಳನ್ನು ಹುಡುಕಿಕೊಳ್ಳಬೇಕಿದೆ' ಎಂಬ ಹಿಂದಿ ಕವಿತೆಯ ಎರಡು ಸಾಲುಗಳನ್ನು ರಾವತ್ ಟ್ವೀಟ್ ಮಾಡಿದ್ದರು. ಈ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸದ್ಯದಲ್ಲೇ ಇದು ಗೊತ್ತಾಗಲಿದೆ ಎಂದರು.

ಅತ್ತ ಕಾಂಗ್ರೆಸ್ ನಾಯಕ ಸಂಜಯ್ ನಿರುಪಮ್ ಕೂಡ, ಈ ಪ್ರಕರಣಗಳ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ಧ್ವನಿ ಎತ್ತಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ಮಧ್ಯೆ, ಪರಂಭೀರ್ ಸಿಂಗ್ ಅವರ ಆರೋಪಗಳ ಸಂಬಂಧ ಅನಿಲ್ ದೇಶ್‌ಮುಖ್ ಎಂಟಂಶಗಳ ಸುದೀರ್ಘ ಸ್ಪಷ್ಟನೆ ನೀಡಿ, ತಿರುಗೇಟು ನೀಡಿದ್ದಾರೆ.

### ಇಂದು ನಿರ್ಧಾರ?

ಅನಿಲ್ ದೇಶ್‌ಮುಖ್ ಅವರ ಕುರಿತಂತೆ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್ ನಾಯಕರು ಸೋಮವಾರ ಸರಣಿ ಸಭೆ ನಡೆಸಲಿದ್ದಾರೆ. ಭಾನುವಾರ ಪತ್ರಿಕಾಗೋಷ್ಠಿ ನಡೆಸಿದ ಎನ್‌ಸಿಪಿ ಪರಮೋಚ್ಚ ನಾಯಕ ಶರದ್ ಪವಾರ್, ದೇಶ್‌ಮುಖ್ ರಾಜೀನಾಮೆ ಬಗ್ಗೆ ಖಚಿತವಾಗಿ ಏನನ್ನೂ ಹೇಳದಿದ್ದರೂ, ನಿರ್ಧಾರ ತೆಗೆದುಕೊಳ್ಳಲು ಸಿಎಂ ಸ್ವತಂತ್ರರು ಎಂದಿದ್ದಾರೆ. ಮೂಲಗಳ ಪ್ರಕಾರ, ಶಿವಸೇನೆ ಕೂಡ ಅನಿಲ್ ದೇಶ್‌ಮುಖ್ ಅವರ ರಾಜೀನಾಮೆ ಬಗ್ಗೆ ಒಲವು ತೋರಿದೆ. ಈಗಾಗಲೇ ಸರ್ಕಾರಕ್ಕೆ ಬಿದ್ದಿರುವ ಏಟುಗಳಿಂದ ಪಾರಾಗಬೇಕು ಎಂದರೆ, ದೇಶ್‌ಮುಖ್ ರಾಜೀನಾಮೆ ಸೂಕ್ತ ಎಂಬುದು ಶಿವಸೇನೆಯ ವಾದ. ಒಂದು ವೇಳೆ, ಅವರು ರಾಜೀನಾಮೆ ನೀಡಿದರೆ, ಅಜಿತ್ ಪವಾರ್ ಅಥವಾ ರಾಜೇಶ್ ತೋಪೆ ಅವರು ಗೃಹ ಸಚಿವರಾಗುವ ಸಾಧ್ಯತೆ ಇದೆ. ಆದರೆ, ಮತ್ತೊಬ್ಬ ಎನ್‌ಸಿಪಿ ನಾಯಕ ಜಯಂತ್ ಪಾಟೀಲ್ ಅವರು, ದೇಶ್‌ಮುಖ್ ರಾಜೀನಾಮೆ ನೀಡಲ್ಲ ಎಂದಿದ್ದಾರೆ.

**ಬಿಜೆಪಿ ಬಿಗಿಬಟ್ಟು:** ಪರಂಭೀರ್ ಸಿಂಗ್ ಅವರ ಸ್ಫೋಟಕ ವಸೂಲಿ ಹೇಳಿಕೆ ಬಿಡುಗಡೆಯಾಗುತ್ತಿದ್ದಂತೆ, ಬಿಜೆಪಿಯಲ್ಲಿ ತೀವ್ರ ಚಟುವಟಿಕೆಗಳು ನಡೆದಿವೆ. ಶನಿವಾರ ರಾತ್ರಿಯೇ, ಅನಿಲ್ ದೇಶ್‌ಮುಖ್ ರಾಜೀನಾಮೆಗೆ ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್ ಒತ್ತಾಯಿಸಿದ್ದಾರೆ. ಜತೆಗೆ, ರಾಜ್ಯಾದ್ಯಂತ ಪ್ರತಿಭಟನೆ ನಡೆಸಲೂ ಬಿಜೆಪಿ ತೀರ್ಮಾನಿಸಿದೆ.

ಅತ್ತ ನವದೆಹಲಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ರವಿಶಂಕರ್ ಪ್ರಸಾದ್, ಪ್ರಕರಣದ ಬಗ್ಗೆ ಪಕ್ಷಪಾತರಹಿತವಾಗಿ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದಾರೆ. ಸಚಿನ್ ವಾಜೆರನ್ನು ಯಾರ ಒತ್ತಾಯದ ಮೇರೆಗೆ ಮರು ನೇಮಕ ಮಾಡಲಾಯಿತು ಎಂಬ ಬಗ್ಗೆಯೂ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.